ಜೊಲ್ಲೆ ಗ್ರುಪ್
ವಾರ್ತಾ ಪತ್ರ
(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)
ಡಿಸೆಂಬರ 2024–ಸಂಪುಟ–8 ಸಂಚಿಕೆ–12

# ದರ್ಪಣ



## ಅಭಿವೃದ್ಧಿಯ ಧ್ರುವತಾರೆ, ಮಹಿಳಾ ಕಣ್ಮಣಿ
## ಸೌ. ಶಶಿಕಲಾ ಅ. ಜೊಲ್ಲೆ

"ಹೆಣ್ಣು ಹುಣ್ಣಲ್ಲಾ ಜಗದ ಕಣ್ಣು" ಎನ್ನುವ ಮಾತಿನಂತೆ ಕನ್ನಡ ನಾಡಿನ ಇತಿಹಾಸದಲ್ಲಿ ಮಹಿಳಾ ಕುಲದ ಪಾತ್ರ ಅವಿಸ್ಮರಣಿಯವಾಗಿದೆ. ಮಹಿಳಾ ರಂಗ ಸಬಲೀಕರಣಗೊಂಡು ಎಲ್ಲಾ ಕ್ಷೇತ್ರಗಳಲ್ಲೂ ದಾಪುಗಾಲಿಟ್ಟಿದೆ. ಅಂತಹ ಮಹಿಳಾ ಕುಲದ ಮಿನುಗುತಾರೆ ನಿಪ್ಪಾಣಿ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ಸಹಕಾರ, ರಾಜಕೀಯ ರಂಗದಲ್ಲಿ ವಿಶೇಷ ಸೇವೆ ಸಲ್ಲಿಸಿ ಮನೆಮಾತಾಗಿದ್ದಾರೆ.

ಸೌ. ಶಶಿಕಲಾ ಜೊಲ್ಲೆಯವರು ಬಸವತತ್ವವನ್ನೇ ಉಸಿರಾಗಿಸಿಕೊಂಡು ಕಾಯಕವೇ ಕೈಲಾಸ" ಎಂಬ ಬಸವವಾಣಿಯನ್ನು ಧ್ಯೇಯವಾಗಿಟ್ಟು ಸಾರ್ಥಕ ಹಾಗೂ ಕ್ರಿಯಾಶೀಲ ಕಾಯಕ ಮಾಡುತತಿದ್ದಾರೆ. ಅವರು ನಿಪ್ಪಾಣಿ ತಾಲೂಕಿನ ಭಿವಶಿ ಗ್ರಾಮದ ಸುಸಂಸ್ಕೃತ ಹರದಾರೆ ಮನೆತನದ ಶೇವಂತಾ ಮತ್ತು ಶ್ರೀಪತಿ ಆದರ್ಶ ದಂಪತಿಗಳ ಉದರದಲ್ಲಿ 20 ನವೆಂಬರ 1969ರಲ್ಲಿ ಜನಿಸಿದರು. ಬಾಲ್ಯದಲ್ಲಿ ತಿಕ್ಷ್ಣಮತಿಗಳಾದ ಇವರು ತಂದೆ ತಾಯಿಯ ಆದರ್ಶಗಳನ್ನು ಮುಂದಿಟ್ಟುಕೊಂಡು ಬೆಳೆದರು. ನಿಪ್ಪಾಣಿ ಹಾಗೂ ಅಥಣಿಯಲ್ಲಿ ವಿದ್ಯಾಭ್ಯಾಸವನ್ನು ಮಾಡಿದ್ದಾರೆ. ಯಕ್ಸಂಬಾ ಪಟ್ಟಣದ ಆದರ್ಶ ಜೊಲ್ಲೆ ಮನೆತನದ ಲಿ. ಲಕ್ಷ್ಮೀಬಾಯಿ ಹಾಗೂ ಶಂಕರ ದಂತಿಗಳ ಸುಪುತ್ರ ಅಣ್ಣಾಸಾಹೇಬ ಜೊಲ್ಲೆ ಅವರೊಂದಿಗೆ ವಿವಾಹವಾಗಿ ಎರಡು ಮಕ್ಕಳ ತಾಯಿಯಾಗಿ, ಆದರ್ಶ ಸೊಸೆಯಾಗಿ ಅತ್ತೆ ಹಾಗೂ ಪತಿಯ ಮಾರ್ಗದರ್ಶನದಲ್ಲಿ ಮನೆತನದ ಭಾರ ಹೊತ್ತಿದ್ದಾರೆ. ಜ್ಯೋತಿಪ್ರಸಾದ ಹಾಗೂ ಬಸವಪ್ರಸಾದರ ಆದರ್ಶ ಮಾತೆಯಾಗಿ ಪ್ರಿಯಾ ಹಾಗೂ ಯಶಸ್ವಿನಿಯವರ ಆದರ್ಶ ಅತ್ತೆಯಾಗಿ ಮನೆತನದ ಸಮಗ್ರ ಏಳಿಗೆಗೆ ಶ್ರಮಿಸಿ ಬಸವತತ್ವದ ಅಡಿಯಲ್ಲಿ ಜೀವನ ನಡೆಸುತ್ತಿದ್ದಾರೆ. ಸಮಾಜಸೇವೆಯ ಉತ್ಕಟ ಅಭಿಲಾಷೆಯೊಂದಿಗೆ ಸಹಕಾರ ಶಿಕ್ಷಣ ಮತ್ತು ಸಮಾಜ ಸೇವಾ ಸಂಸ್ಥೆಯನ್ನು ತೆರೆದು ಸಾಮಾಜಿಕ ಬದುಕಿಗೆ ಕಾಲಿಟ್ಟರು. ಸಮಾಜ ಸೇವೆಯನ್ನು ಆರಂಭಿಸಿ ನೊಂದವರ ಧ್ವನಿಯಾಗಿ, ಬಡವರ ಕಣ್ಣೀರು ಒರೆಸಿದ ಮಾತೃ ಹೃದಯಿ ಮಹಾತಾಯಿ.

### ಜನಪರ ಕಾಯಕ

ಕನ್ನಡ ನಾಡಿನ ಸಾಧು, ಸಜ್ಜನರ, ಶರಣರ, ಸಂತರ ಒಡನಾಡಿಗಳಾಗಿ ಆಧ್ಯಾತ್ಮ ಜೀವನಕ್ಕೆ ಮಾರುಹೋಗಿ, ನಾಲಿಗೆಯ ಮೇಲೆ ಶರಣರ ವಚನಗಳನ್ನು ಧರಿಸಿ, ಉತ್ತಮ ವಾಗ್ಮಿಯಾಗಿದ್ದಾರೆ. ಬೆಳಗಾವಿ ಜಿಲ್ಲೆಯ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್, ಕದಳಿ ವೇದಿಕೆಯ ಅಧ್ಯಕ್ಷರಾಗಿ ನಿಪ್ಪಾಣಿ ನಗರದಲ್ಲಿ ಐತಿಹಾಸಿಕ ಕದಳಿ ಸಮಾವೇಶಗಳನ್ನು ಆಯೋಜಿಸಿದ್ದಾರೆ. ಮುಂದೆ ಭಾರತೀಯ ಜನತಾ ಪಕ್ಷದ ಕರ್ನಾಟಕ ಮಹಿಳಾ ಮೋರ್ಚಾ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಸಮಾಜದ ಸೇವೆಯೊಂದಿಗೆ ರಾಜಕೀಯಕ್ಕೆ ಕಾಲಿಟ್ಟು ಹಲವಾರು ಏಳು ಬೀಳುಗಳನ್ನು ಎದುರಿಸಿ ಅಭಿವೃದ್ಧಿ ಪಥದತ್ತ ಮುನ್ನುಗ್ಗುತ್ತಿದ್ದಾರೆ.


ಮಹಿಳಾ ಸಮಾಜ, ಬಡವರ, ಅನಾಥರ, ನೊಂದವರ ಪರ ಕೆಲಸಮಾಡಿ ಜನ ನಾಯಕಿಯಾಗಿ ಹೊರಹೊಮ್ಮಿ 2013ರಲ್ಲಿ ನಿಪ್ಪಾಣಿ ಶಾಸಕರಾಗಿ ಆಯ್ಕೆಯಾಗಿ ಜನ ಸೇವೆಯೆ ಜನಾರ್ಧನನ ಸೇವೆ ಎಂದು ತಿಳಿದು ತಮ್ಮ ಕಾಯಕ ಆರಂಭಿಸಿ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ನಿಪ್ಪಾಣಿಯ ಪ್ರಥಮ ಮಹಿಳಾ ಶಾಸಕಿಯಾಗಿ, ಹಿಂದುಳಿದ ನಿಪ್ಪಾಣಿ ತಾಲೂಕನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸಲು ನೂರಾರು ಕೋಟಿ ಅನುದಾನ ತಂದು ನಿಪ್ಪಾಣಿ ಚಿತ್ರಣವನ್ನೇ ಬದಲಿಸಿದ್ದಾರೆ. ಇವರ ಜನಪರ ಕಾಯಕ ಕಂಡ ಜನರು 2018 ರಲ್ಲಿ ನಿಪ್ಪಾಣಿ ಶಾಸಕರಾಗಿ ಮರು ಆಯ್ಕೆ ಮಾಡಿದ್ದಾರೆ. ಕರ್ನಾಟಕ ಸರ್ಕಾರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾಗಿ, ಬಸವರಾಜ ಬೊಮ್ಮಾಯಿ ಸಂಪುಟದ ಮುಜರಾಯಿ ಸಚಿವರಾಗಿ ಹಲವು ಜಿಲ್ಲೆಗಳ ಉಸ್ತುವಾರಿ ಸಚಿವರಾಗಿ ಅಚ್ಚಳಿಯದ ಜನಪರ ಕಾರ್ಯ ಮಾಡಿದ್ದಾರೆ. ಮುಜರಾಯಿ ಸಚಿವರಾಗಿ ಆಧ್ಯಾತ್ಮ ಲೋಕ ಬಲಿಷ್ಠಗೊಳಿಸಿದ್ದಾರೆ. ನಿಪ್ಪಾಣಿ ಪರಿಸರಕ್ಕೆ ವಿಕಾಸದ ಗಂಗೆ ಹರಿಸಿ ಸಾವಿರಾರು ಕೋಟಿ ಅನುದಾನ ತಂದು ನಿಪ್ಪಾಣಿ ಕ್ಷೇತ್ರವನ್ನು ಮಾದರಿಯಾಗಿಸಿದ್ದಾರೆ. 2023ರಲ್ಲಿ ಮೂರನೇ ಬಾರಿಗೆ ಶಾಸಕರಾಗಿ ಹ್ಯಾಟ್ರಿಕ್ ಸಾಧನೆ ಮಾಡಿದ್ದಾರೆ. ವಿಶೇಷ ಓಲಿಂಪಿಕ್ ಭಾರತ ಕರ್ನಾಟಕದ ರಾಜ್ಯದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅತ್ಯಂತ ವಿನಯ ವಿದ್ಯಾ ಸಂಪನ್ನರಾಗಿ ಸಕಲ ರಂಗದ ಧ್ರುವತಾರೆಯಾಗಿ ಹೊರ ಹೊಮ್ಮಿದ್ದಾರೆ. ಜೊಲ್ಲೆ ಸಮೂಹದ ಏಳಿಗೆಯಲ್ಲಿ ಜೊಲ್ಲೆ ಗ್ರುಪ್ ಸಂಸ್ಥಾಪಕರು ಹಾಗೂ ಮಾಜಿ ಸಂಸದರಾದ ಅಣ್ಣಾಸಾಹೇಬ ಜೊಲ್ಲೆಯವರ ಸಹಧರ್ಮಿನಿಯಾಗಿ ಶಕ್ತಿ ತುಂಬುತ್ತಿದ್ದಾರೆ. ಅಳಿವಿನ ಅಂಚಿನಲ್ಲಿದ್ದ ಹಾಲಶುಗರ ಸಕ್ಕರೆ ಕಾರ್ಖಾನೆಗೆ ಪುನರುಜ್ಜೀವನ ನೀಡಿದ್ದಾರೆ.

ಜೊಲ್ಲೆ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಶೈಕ್ಷಣಿಕ ಸೇವೆ ಸಲ್ಲಿಸುತ್ತಿದ್ದಾರೆ. ಭಾಷಾ ಬಾಂಧವ್ಯದೊಂದಿಗೆ ಕನ್ನಡದ ಅಸ್ತಿತ್ವವನ್ನು ಕಾಯ್ದುಕೊಂಡಿದ್ದಾರೆ. ಕ್ಷೇತ್ರದ ಜನರ ನಾಡಿಮಿಡಿತ ಅರಿತು ಅವರ ಸುಖ ದುಃಖಗಳಲ್ಲಿ ಸಹಭಾಗಿಯಾಗುತ್ತಾರೆ. ಇವರ ಕಾಯಕಕ್ಕೆ ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ, ಆದರ್ಶ ಅವ್ವ ಪ್ರಶಸ್ತಿ, ಮಹಿಳಾ ರತ್ನ ಪ್ರಶಸ್ತಿ ಸಹಿತ ಹಲವಾರು ಪ್ರಶಸ್ತಿಗಳನ್ನು ಮೂಡಿಗೇರಿಸಿಕೊಂಡಿದ್ದಾರೆ. ಗಡಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನಗಳು ಅದ್ದೂರಿಯಾಗಿ ನಡೆಯುವಂತೆ ನೇತೃತ್ವ ವಹಿಸಿದ್ದಾರೆ. ನಿಪ್ಪಾಣಿ ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್ತು, ಗಡಿನಾಡು ಕನ್ನಡ ಬಳಗ, ಅಖಿಲ ಭಾರತ ಶರಣರ ಸಾಹಿತ್ಯ ಪರಿಷತ್ತು, ಕದಳಿ ವೇದಿಕೆಯ ಮಾರ್ಗದರ್ಶಕಿಯಾಗಿ ನಮಗೆಲ್ಲಾ ಬಹುದೊಡ್ಡ ಶಕ್ತಿಯಾಗಿದ್ದಾರೆ. ಮಾತೃಹೃದಯದ ಮಾತೆಯಾಗಿ ನಮಗೆಲ್ಲ ಹೆಮ್ಮೆಯ ನಾಯಕಿಯಾಗಿದ್ದಾರೆ.

ಇಂಥಹ ಅಭಿವೃದ್ಧಿಯ ಹರಿಕಾರರು, ಬಡವರ ಬಂಧು, ದೀನದಲಿತರ ಆಶಾಕಿರಣ, ನೊಂದವರ ಧ್ವನಿ, ವಿಕಾಸ ರತ್ನ, ಅಪ್ಪಟ ಕನ್ನಡತಿ, ಜನನಾಯಕಿಯಾದ ಇವರು ಇಂದು ಸಾರ್ಥಕ 55 ವಸಂತಗಳನ್ನು ದಾಟಿ 56ಕ್ಕೆ ಕಾಲಿಟ್ಟು ಪಾದಾರ್ಪಣೆ ಮಾಡುತ್ತಿದ್ದಾರೆ. ಇಂತಹ ಶುಭ ಸಮಯದಲ್ಲಿ ಹೃದಯ ದುಂಬಿ ಶುಭ ಕೋರುತ್ತಾ ನಮ್ಮ ನಾಯಕಿ ಇನ್ನೂ ಹೆಚ್ಚೆಚ್ಚು ರಾಜಕೀಯ ಯಶಸ್ಸು ಕಾಣಲಿ ಅವರಿಗೆ ಕನ್ನಡಾಂಬೆ, ಭಾರತಾಂಬೆ, ಬಸವಾದಿ ಶಿವ ಶರಣರು ಹಾಗೂ ಗುರು ಕುಮಾರ ಶಿವಯೋಗಿಗಳು ಉತ್ತಮ ಆರೋಗ್ಯ ದೀರ್ಘ ಆಯಸ್ಸು ಕರುಣಿಸಲಿ ಎಂದು ಪ್ರಾರ್ಥಿಸಿ ನಮ್ಮ ನಾಯಕಿ ಶತಮಾನ ಕಂಡ ಶಶಿಯಾಗಿ ಬೆಳಗಲಿ ಎಂದು ಹಾರೈಸುತ್ತಾ ಜನ್ಮದಿನದ ಹಾರ್ದಿಕ ಶುಭಾಶಯಗಳನ್ನು ಕೋರುವೆ.

ಪ್ರೊ. ಮಿಥುನ ಅಂಕಲಿ
ಸಹ ಪ್ರಾಧ್ಯಾಪಕರು
ಬಸವಜ್ಯೋತಿ ಪದವಿ ಮಹಾವಿದ್ಯಾಲಯ, ನಣದಿ.

ಶ್ರೀ ಬೀರೇಶ್ವರ ಕೋ-ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ)



## ಶಿವಶಂಕರ ಜೊಲ್ಲೆ ಕನ್ನಡ ಪ್ರಾಥಮಿಕ ಹಾಗೂ ಪ್ರೌಢ ಶಾಲೆ, ಯಕ್ಸಂಬಾ
# ವಾರ್ಷಿಕ ಕ್ರೀಡಾಕೂಟ-2024-25



ಸನ್ 2024-25 ನೇ ಸಾಲಿನ ವಾರ್ಷಿಕ ಕ್ರೀಡಾಕೂಟ ಶಿವಶಂಕರ ಜೊಲ್ಲೆ ಕನ್ನಡ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ದಿನಾಂಕ:-29-11-2024 ರಂದು ಜರುಗಿತು. ಸದರಿ ಕ್ರೀಡಾಕೂಟದ ಉದ್ಘಾಟನಾ ಸಮಾರಂಭವನ್ನು ಧ್ವಜಾರೋಹಣ ಮಾಡುವ ಮುಖಾಂತರ ಜೊಲ್ಲೆ ಗ್ರೂಪ್ ಪ್ರೇರಣಾ ಶಕ್ತಿ ಹಾಗೂ ಆಶಾಜ್ಯೋತಿ ವಿಶೇಷ ಮಕ್ಕಳ ವಸತಿ ಶಾಲೆಯ ಅಧ್ಯಕ್ಷರಾದ ಶ್ರೀ. ಜ್ಯೋತಿಪ್ರಸಾದ ಅಣ್ಣಾಸಾಹೇಬ ಜೊಲ್ಲೆಯವರು ಚಾಲನೆ ನೀಡಿದರು.

ಸಂಸ್ಥೆಯ ಮುಖ್ಯ ಶೈಕ್ಷಣಿಕ ಆಡಳಿತಾಧಿಕಾರಿ ಡಾ॥ ಶಿರೀಷ ಕೇರೂರ ಅವರು ಮಾತನಾಡಿ ಆರೋಗ್ಯದ ಹಿತದೃಷ್ಟಿಯಿಂದ ಕ್ರೀಡೆಗಳಲ್ಲಿ ಪಾಲ್ಗೊಳ್ಳಬೇಕು, ಪ್ರತಿನಿತ್ಯ ಆಟವಾಡುವುದನ್ನು ಹವ್ಯಾಸವಾಗಿ ಬೆಳೆಸಿಕೊಳ್ಳಬೇಕು ಹಾಗೂ ಪ್ರತಿನಿತ್ಯ ಆಟವಾಡುವುದರಿಂದ ಮನಸ್ಸಿಗೆ ಸ್ಫೂರ್ತಿ ಸಿಗುತ್ತದೆ ಎಂದರು. ಸ್ಪರ್ಧಾತ್ಮಕ ಮನೋಭಾವದಿಂದ ಆಟದಲ್ಲಿ ಭಾಗವಹಿಸಿ ಗೆಲುವನ್ನು ಸಾಧಿಸಿ ಮತ್ತು ಅಭ್ಯಾಸ ಚಟುವಟಿಕೆಗಳಲ್ಲಿ ಅಷ್ಟೇ ಭಾಗವಹಿಸದೆ, ಕ್ರೀಡೆಗಳಲ್ಲಿ ಕೂಡಾ ಭಾಗವಹಿಸಬೇಕು ಇದರಿಂದ ನಮ್ಮಲ್ಲಿರುವ ಕೊರತೆಯನ್ನು ಅರಿತು ಸುಧಾರಿಸಿಕೊಳ್ಳಲು ಅವಕಾಶ ದೊರೆಯುತ್ತದೆ ಎಂದು ಮಾರ್ಮಿಕವಾಗಿ ಹೇಳಿದರು.

ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರಾದ ವ್ಹಿ. ಆರ್. ಭಿವಸೆ ಮಾತನಾಡಿ ಸಹಪಠ್ಯ ಚಟುವಟಿಕೆಗಳಿಗೆ ಕ್ರೀಡಾ ಚಟುವಟಿಕೆಗಳು ಪೂರಕ, ಇದರಿಂದ ಮನಸ್ಸು ಏಕಾಗ್ರತೆಗೊಳ್ಳುವುದರ ಜೊತೆಗೆ ದೈಹಿಕವಾಗಿ ಸದೃಡರಾಗುತ್ತೇವೆ ಎಂದರು.

ಇದೇ ವೇಳೆ ದೈಹಿಕ ಶಿಕ್ಷಕರಾದ ಡಿ. ಆರ್. ಸರಡಗಿಕರ ಪ್ರತಿಜ್ಞಾ ವಿಧಿ ಬೋಧಿಸಿದರು. ವಿದ್ಯಾರ್ಥಿಗಳಿಂದ ಜರುಗಿದ ವಿವಿಧ ತಂಡಗಳ ಪಥಸಂಚಲನದ ನಿರ್ಣಯವನ್ನು ಎನ್. ಸಿ. ಸಿ. ತರಬೇತುದಾರರಾದ ಸಂದೀಪ ಮಗದುಮ್ಮ ನಿರ್ವಹಿಸಿ, ಅತ್ಯುತಮ ಪಥಸಂಚಲನ ಪ್ರದರ್ಶಿಸಿದ ಮಾರ್ತಂಡ ತಂಡಕ್ಕೆ ಅಭಿನಂದಿಸಲಾಯಿತು.

ಅದೇ ರೀತಿ ಸಂಸ್ಥೆಯ ಸಂಚಾಲಕ ಮಂಡಳಿಯ ಸದಸ್ಯರಾದ ಸುಜಾತಾ ಕಬಾಡೆ, ಲತಾ ವಾಳಕೆ, ಅನುಸಯಾ ಪಾಟೀಲ, ದೈಹಿಕ ಶಿಕ್ಷಕರಾದ ಆರ್.ಬಿ.ಚಮಕಲೆ, ಎಲ್ಲ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ಮಯೂರಿ ಜಾಧವ ಸ್ವಾಗತಿಸಿ, ಪ್ರತಿಜ್ಞಾ ಧರ್ಮೋಜೆ ವಂದಿಸಿ, ಪೂರ್ವಾ ವಾಲಿಕರ ನಿರೂಪಿಸಿದರು.

# ರಾಷ್ಟ್ರೀಯ ಪತ್ರಿಕೋದ್ಯಮ ದಿನ

ರಾಷ್ಟ್ರೀಯ ಪತ್ರಿಕೋದ್ಯಮ ದಿನವು ವಿಶ್ವಾದ್ಯಂತ ಸಮಾಜಗಳನ್ನು ರೂಪಿಸುವಲ್ಲಿ ಪತ್ರಕರ್ತರು ಮತ್ತು ಮಾಧ್ಯಮಗಳು ವಹಿಸುವ ನಿರ್ಣಾಯಕ ಪಾತ್ರವನ್ನು ಗುರುತಿಸಲು ಮೀಸಲಾದ ದಿನವಾಗಿದೆ. ಈ ದಿನದಂದು, ಸತ್ಯದ ನಿರಂತರ ಅನ್ವೇಷಣೆ, ನಾಗರಿಕರಿಗೆ ಮಾಹಿತಿ ನೀಡುವ ಅವರ ಜವಾಬ್ದಾರಿ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಅವರ ಬದ್ಧತೆಯನ್ನು ನಾವು ಅಂಗೀಕರಿಸುತ್ತೇವೆ. 2024 ರಲ್ಲಿ, "ಶಾಂತಿ ಮತ್ತು ಉತ್ತರದಾಯಿತ್ವಕ್ಕಾಗಿ ಪತ್ರಿಕೋದ್ಯಮ" ಎಂಬ ವಿಷಯದ ಮೇಲೆ ಕೇಂದ್ರೀಕರಿಸುವ ರಾಷ್ಟ್ರೀಯ ಪತ್ರಿಕೋದ್ಯಮ ದಿನವನ್ನು ನವೆಂಬರ್ 17 ರಂದು ಆಚರಿಸಲಾಗುತ್ತದೆ. ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯುವಲ್ಲಿ ಮತ್ತು ಶಾಂತಿಯನ್ನು ಉತ್ತೇಜಿಸುವಲ್ಲಿ ಪತ್ರಕರ್ತರು ಹೊಂದಿರುವ ಜವಾಬ್ದಾರಿಯನ್ನು ಇದು ನೆನಪಿಸುತ್ತದೆ.

### ರಾಷ್ಟ್ರೀಯ ಪತ್ರಿಕೋದ್ಯಮ ದಿನದ ದಿನಾಂಕ 2024

ರಾಷ್ಟ್ರೀಯ ಪತ್ರಿಕೋದ್ಯಮ ದಿನವನ್ನು ವಾರ್ಷಿಕವಾಗಿ ನವೆಂಬರ್ 17 ರಂದು ಆಚರಿಸಲಾಗುತ್ತದೆ. ಈ ದಿನಾಂಕವು 1966 ರಲ್ಲಿ ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾದ ಸ್ಥಾಪನೆಯನ್ನು ನೆನಪಿಸುತ್ತದೆ, ಇದು ಪತ್ರಿಕಾ ಸ್ವಾತಂತ್ರ್ಯ, ನೈತಿಕತೆ ಮತ್ತು ಜವಾಬ್ದಾರಿಯನ್ನು ಉತ್ತೇಜಿಸಲು ಸಹಾಯ ಮಾಡಿತು. ಇದು ಪ್ರಜಾಪ್ರಭುತ್ವ ಸಮಾಜದಲ್ಲಿ ಪತ್ರಿಕೋದ್ಯಮ ವಹಿಸುವ ಪ್ರಮುಖ ಪಾತ್ರದ ಜ್ಞಾಪನೆಯಾಗಿ ಕಾರ್ಯನಿರ್ವಹಿಸುತ್ತದೆ. ಈ ದಿನದಂದು, ಪತ್ರಕರ್ತರು, ಮಾಧ್ಯಮ ವೃತ್ತಿಪರರು ಮತ್ತು ಸಾರ್ವಜನಿಕರು ಒಟ್ಟಾಗಿ ಪತ್ರಿಕಾ ಸ್ವಾತಂತ್ರ್ಯದ ಮೌಲ್ಯಗಳು ಮತ್ತು ಜವಾಬ್ದಾರಿಯುತ ಪತ್ರಿಕೋದ್ಯಮದ ಮಹತ್ವವನ್ನು ಆಚರಿಸುತ್ತಾರೆ.

### ರಾಷ್ಟ್ರೀಯ ಪತ್ರಿಕೋದ್ಯಮ ದಿನದ ಥೀಮ್ 2024

2024 ರ ರಾಷ್ಟ್ರೀಯ ಪತ್ರಿಕೋದ್ಯಮ ದಿನದ ವಿಷಯವು "ಶಾಂತಿ ಮತ್ತು ಉತ್ತರದಾಯಿತ್ವಕ್ಕಾಗಿ ಪತ್ರಿಕೋದ್ಯಮ" ಆಗಿದೆ. ಸಮಾಜಗಳಲ್ಲಿ ಶಾಂತಿಯನ್ನು ಬೆಳೆಸಲು, ಖಾತೆಗೆ ಅಧಿಕಾರವನ್ನು ಹಿಡಿದಿಟ್ಟುಕೊಳ್ಳಲು ಮತ್ತು ತುಳಿತಕ್ಕೊಳಗಾದ ಮತ್ತು ಅಂಚಿನಲ್ಲಿರುವವರ ಧ್ವನಿಗಳಿಗೆ ವೇದಿಕೆಯಾಗಿ ಕಾರ್ಯನಿರ್ವಹಿಸಲು ಪತ್ರಿಕೋದ್ಯಮದ ಅಗತ್ಯವನ್ನು ಈ ಥೀಮ್ ಒತ್ತಿಹೇಳುತ್ತದೆ. ಪತ್ರಕರ್ತರು ಎದುರಿಸಬಹುದಾದ ಸವಾಲುಗಳನ್ನು ಲೆಕ್ಕಿಸದೆ ಸತ್ಯದ ಅನ್ವೇಷಣೆಯನ್ನು ಮುಂದುವರಿಸಲು ಇದು ಕರೆ ನೀಡುತ್ತದೆ ಮತ್ತು ಪಾರದರ್ಶಕತೆಯನ್ನು ಕಾಪಾಡುವಲ್ಲಿ, ಶಾಂತಿಯನ್ನು ನಿರ್ಮಿಸುವಲ್ಲಿ ಮತ್ತು ನ್ಯಾಯವನ್ನು ಉತ್ತೇಜಿಸುವಲ್ಲಿ ಪತ್ರಿಕೋದ್ಯಮದ ಪಾತ್ರವನ್ನು ಎತ್ತಿ ತೋರಿಸುತ್ತದೆ.

### ರಾಷ್ಟ್ರೀಯ ಪತ್ರಿಕೋದ್ಯಮ ದಿನದ ಇತಿಹಾಸ

ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ ರಚನೆಯ ಗೌರವಾರ್ಥವಾಗಿ ಭಾರತದಲ್ಲಿ ಮೊದಲ ಬಾರಿಗೆ ನವೆಂಬರ್ 17, 1997 ರಂದು ರಾಷ್ಟ್ರೀಯ ಪತ್ರಿಕೋದ್ಯಮ ದಿನವನ್ನು ಆಚರಿಸಲಾಯಿತು. ಮಾಧ್ಯಮಗಳು ಸ್ವತಂತ್ರವಾಗಿ ಮತ್ತು ನೈತಿಕವಾಗಿ ಕಾರ್ಯನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳಲು 1966 ರಲ್ಲಿ ಪ್ರೆಸ್ ಕೌನ್ಸಿಲ್ ಅನ್ನು ಸ್ಥಾಪಿಸಲಾಯಿತು. ಸಾರ್ವಜನಿಕ ವ್ಯಕ್ತಿಗಳು ಮತ್ತು ಸಂಸ್ಥೆಗಳನ್ನು ಹೊಣೆಗಾರರನ್ನಾಗಿ ಮಾಡುವ ಮೂಲಕ ಪ್ರಜಾಪ್ರಭುತ್ವವನ್ನು ಕಾಪಾಡುವಲ್ಲಿ ಅವರ ಪಾತ್ರದ ಪ್ರಾಮುಖ್ಯತೆಯನ್ನು ಗುರುತಿಸುವಾಗ ಹೆಚ್ಚು ತಿಳುವಳಿಕೆಯುಳ್ಳ ಮತ್ತು ನ್ಯಾಯಯುತ ಸಮಾಜವನ್ನು ರಚಿಸುವಲ್ಲಿ ಪತ್ರಕರ್ತರ ಪಾತ್ರವನ್ನು ಆಚರಿಸಲು ಈ ದಿನವನ್ನು ಗುರುತಿಸಲಾಗಿದೆ. ಕಾಲಾನಂತರದಲ್ಲಿ, ಇದು ಜಾಗತಿಕ ಆಚರಣೆಯಾಗಿ ವಿಕಸನಗೊಂಡಿತು, ಅಭಿವ್ಯಕ್ತಿ ಸ್ವಾತಂತ್ರ್ಯ, ಪಾರದರ್ಶಕತೆ ಮತ್ತು ಸಾಮಾಜಿಕ ಪ್ರಗತಿಯ ಮೇಲೆ ಪತ್ರಿಕೋದ್ಯಮದ ಧನಾತ್ಮಕ ಪ್ರಭಾವವನ್ನು ಆಚರಿಸುತ್ತದೆ.

### ರಾಷ್ಟ್ರೀಯ ಪತ್ರಿಕೋದ್ಯಮ ದಿನದ ಮಹತ್ವ


ರಾಷ್ಟ್ರೀಯ ಪತ್ರಿಕೋದ್ಯಮ ದಿನವು ಆಧುನಿಕ ಜಗತ್ತಿನಲ್ಲಿ ಮಾಧ್ಯಮದ ಪ್ರಾಮುಖ್ಯತೆಯನ್ನು ಒತ್ತಿಹೇಳುತ್ತದೆ. ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಉತ್ತೇಜಿಸುವಲ್ಲಿ, ಸಾರ್ವಜನಿಕರಿಗೆ ಶಿಕ್ಷಣ ನೀಡುವಲ್ಲಿ ಮತ್ತು ಮಾನವ ಹಕ್ಕುಗಳನ್ನು ರಕ್ಷಿಸುವಲ್ಲಿ ಪತ್ರಕರ್ತರ ಕೊಡುಗೆಯನ್ನು ಇದು ಅಂಗೀಕರಿಸುತ್ತದೆ. ಮುಕ್ತ ಮಾಧ್ಯಮವನ್ನು ಹೊಂದಿರುವ ದೇಶಗಳಲ್ಲಿ, ಪತ್ರಿಕೋದ್ಯಮವು ಕಾವಲುಗಾರನಾಗಿ ಕಾರ್ಯ ನಿರ್ವಹಿಸುತ್ತದೆ, ಸರ್ಕಾರದ ಕ್ರಮಗಳನ್ನು ಪರಿಶೀಲಿಸುತ್ತದೆ, ಭ್ರಷ್ಟಾಚಾರವನ್ನು ಬಹಿರಂಗಪಡಿಸುತ್ತದೆ ಮತ್ತು ನಾಗರಿಕರಿಗೆ ಉತ್ತಮ ತಿಳುವಳಿಕೆ ಇದೆ ಎಂದು ಖಚಿತಪಡಿಸುತ್ತದೆ. ಸವಾಲಿನ ಪರಿಸರದಲ್ಲಿ ತಮ್ಮ ಕೆಲಸವನ್ನು ಮುಂದುವರಿಸುವಾಗ ಅವರ ಸುರಕ್ಷತೆ ಮತ್ತು ಸ್ವಾತಂತ್ರ್ಯಕ್ಕೆ ಬೆದರಿಕೆಯನ್ನು ಎದುರಿಸುವ ಪತ್ರಕರ್ತರನ್ನು ಬೆಂಬಲಿಸಲು ಮತ್ತು ರಕ್ಷಿಸಲು ದಿನವು ಜ್ಞಾಪನೆಯಾಗಿ ಕಾರ್ಯನಿರ್ವಹಿಸುತ್ತದೆ.

## ಹೆಣ್ಣಿನ ಮಾನವೀಯತೆ

ಸೊಸೆಯಾಗಿ ಬಂದೇನವ್ವಾ
ಮಗಳಾಗಿ ನಿಂತೇನಾ
ತವರನ್ನು ಮರೆತು ಬಂದೇನವ್ವಾ
ಇದ್ದದ್ದನ್ನು ತವರಾಗಿ ಮಾಡಿಕೊಂಡೆನವ್ವಾ
ಅತ್ತೆಯನ್ನು ತಾಯಿಯಾಗಿ ತಿಳಿದೇನವ್ವಾ
ಮಾವನನ್ನು ತಂದೆಯೆಂದು ತಿಳಿದೇನವ್ವಾ
ಎಲ್ಲರಲ್ಲಿ ಒಂದಾಗಿ ಬೆಳೆದನವ್ವಾ
ನಗು ನಗುತಾ ಬಾಳುವೇ ಮಾಡೇನವ್ವಾ
ಹೆಂಗಸರಲ್ಲಿ ಒಕ್ಕಟ್ಟು ಬೆಳೆಸೆನವ್ವಾ
ಪುರುಷರಿಗೆ ಸಮಾನವಾಗಿ ನಡೆದನವ್ವಾ
ಕಾಯಕವೇ ದೇವರೆಂದು ತಿಳಿದೇನಮ್ಮಾ
ಮಾಸವನಾಗಿ ಬಾಳುವುದನ್ನು ಕಲೀತನಾವ್ವಾ
ಸ್ವ–ಸಹಾಯ ಸಂಘ ಕಟ್ಟೆನವ್ವಾ
ಹಣದ ಮಹತ್ವ ಎಲ್ಲರಿಗೂ ತಿಳಿಸೇನವ್ವಾ
ಹೆಣ್ಣಿನ ಅಬಲೆ ಪಟ್ಟ ತೆಗೆಸೇನವ್ವಾ
ಹೆಣ್ಣು ಸಬಲೆಯಂದು ತಿಳಿಸೇನವ್ವಾ
ಮಕ್ಕಳಿಗೆ ಸಂಸ್ಕಾರ ಹೇಳೆನವ್ವಾ
ಮೊದಲ ಗುರುವಾಗಿ ನಿಂತೆನವ್ವಾ
ತಾಯಿಯ ಭಾಷೆಯ ಶಿಕ್ಷಣ ನೀಡಿದೇನವ್ವಾ
ಅನ್ಯ ಭಾಷೆ ಅರಿಯಲು ಹೇಳಿದೇನವ್ವಾ
ಹಳ್ಳಿ ಸ್ವಚ್ಛ ಇಡಲು ಹೇಳಿದೇನವ್ವಾ
ಆರೋಗ್ಯದ ಬಗ್ಗೆ ತಿಳಿ ಹೇಳಿದೇನವ್ವಾ
ಪ್ರಾಣಿ ದಯ ಬೇಕೆಂದೇನವ್ವಾ
ಭೂಮಿಯು ಮಣ್ಣು ಕಾಪಾಡಲು ತಿಳಿಸೇನವ್ವಾ
ವ್ಯಸನ ಮುಕ್ತರಾಗಲು ತಿಳಿಸಿದೇನವ್ವಾ
ಅನ್ನ ಹಂಚಿ ತಿನ್ನಲು ತಿಳಿಸಿದೇನವ್ವಾ
ಆಸೆಯಿಂದ ದೂರವಿರಲು ತಿಳಿಸಿದೇನವ್ವಾ
ಅಹಿಂಸೆಯ ಮಹತ್ವ ತಿಳಿಸಿದೇನವ್ವಾ
ಭ್ರೂಣ ಹತ್ಯೆ, ಬೇಡೆಂದೇನವ್ವಾ
ಹೆಣ್ಣಿಗೆ ಹೆಣ್ಣು ವೈರತ್ವ ಬೇಡೆಂದೇನವ್ವಾ
ಗಂಡಿಗೆ ಹೆಣ್ಣಿನ ಸ್ಥಾನ ತಿಳಿಸೇನವ್ವಾ
ಗಂಡು–ಹೆಣ್ಣು ಭೇದ ಬೇಡವೆಂದೇನವ್ವಾ
ಸ್ತ್ರೀ–ಪುರುಷ ಸಮಾನತೆ ಜಪಿಸೇನವ್ವಾ
ಒಂದು ಬಿಟ್ಟು ಒಂದು ಇಲ್ಲವೆಂದು ಹೇಳಿದೇನವ್ವಾ
ಮಕ್ಕಳಿಗೆ ತಾಯಿ–ತಂದೆ ದೇವರವ್ವಾ
ಮನೆಯಲ್ಲಿ ಸ್ವರ್ಗ ಕಾಣಲು ಹೇಳಿದೇನವ್ವಾ
ಧರ್ಮದ ಮಹಿಮೆ ಹೇಳಿದೇನವ್ವಾ
ಮಾನವೀಯತೆಯನ್ನು ತಿಳಿಸಿದೇನವ್ವಾ
ಕೂಡಿ ಬಾಳಿದರೆ ಸ್ವರ್ಗ ಎಂದೇನವ್ವಾ
ನಗುವುದೇ ಸ್ವರ್ಗ ಎಂದೇನವ್ವಾ

ಡಾ. ಪಿ. ಎಮ್. ಭೋಜೆ
ವಿಶ್ರಾಂತಿ ಮುಖ್ಯೋಪಾಧ್ಯಾಯರು ಸದಲಗಾ

## ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಯಕ್ಸಂಬಾ





ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಯಕ್ಸಂಬಾ ದಸರಾ ಮತ್ತು ದೀಪಾವಳಿ ಹಬ್ಬದ ನಿಮಿತ್ಯ ಆಯೋಜಿಸಿದ್ದ "ಜ್ಯೋತಿ ಶಾಪಿಂಗ್ ಫೆಸ್ಟಿವಲ್" ಜ್ಯೋತಿ ಬಜಾರದಲ್ಲಿ 2000/– ರೂ ಶಾಪಿಂಗ್ ಮಾಡಿದವರಿಗೆ ಲಕ್ಕಿ ಡ್ರಾ ವಿಜೇತರಿಗೆ ಬಹುಮಾನ ನೀಡಲಾಯಿ. ಪ್ರಥಮ ಬಹುಮಾನ ಶ್ರೀ ಸಂಜಯ ಉಗಾರೆ. ಮೋಟಾರ್ ಬೈಕ್, ದ್ವಿತೀಯ ಬಹುಮಾನ ಶ್ರೀ ಭರಮು ಪಾಟೀಲ ವಾಷಿಂಗ್ ಮಿಷನ್, ತೃತೀಯ ಬಹುಮಾನ ಸೌ. ವಿಜಯಲಕ್ಷ್ಮಿ ಚವ್ಹಾಣ. ರೆಫ್ರಿಜರೇಟರ್, ಚತುರ್ಥ ಬಹುಮಾನ ಕಿರಣ ಖೋತ. ಮೊಬೈಲ್, ಐದನೇ ಬಹುಮಾನ ಸಂಜಯ ಜೀರಳಿ. ಸ್ಟೀಲ್ ಕಪ್ಬೋರ್ಡ್, ಆರನೇ ಬಹುಮಾನ ವಿನೋದ ಇಂಗಳೆ. ಮಿಕ್ಸರ್, ಏಳನೇ ಬಹುಮಾನ ಜಾಫರ್ ಪಟೇಲ. ಸಿಲಿಂಗ ಫ್ಯಾನ್, ಎಂಟನೇ ಬಹುಮಾನ ಅಭಿಷೇಕ ಜಕ್ಕಣ್ಣವರ. ಹೋಂ ಥಿಯೇಟರ್, ಒಂಬತ್ತನೇ ಬಹುಮಾನ ಶ್ರೀಕಾಂತ ದೇವಣಗೋಳ. ಕುಕ್ಕರ್, ಹತ್ತನೇ. ಬಹುಮಾನ ಶಿಲ್ಪಾರಾಣಿ ಕೊಂಕೇರಿ. ಇಂಡಕ್ಷನ್ ಸ್ಟೋವ್. ಹಾಗೂ 200 ಗ್ರಾಹಕರಿಗೆ ಸಮಾಧಾನಕರ ಬಹುಮಾನ ವಿತರಿಸಲಾಯಿತು.


ಪ್ರಥಮ ಬಹುಮಾನ ಶ್ರೀ ಸಂಜಯ ಉಗಾರೆ. ಮೋಟಾರ್ ಬೈಕ್


ದ್ವಿತೀಯ ಬಹುಮಾನ ಶ್ರೀ ಭರಮು ಪಾಟೀಲ ವಾಷಿಂಗ್ ಮಿಷನ್


ತೃತೀಯ ಬಹುಮಾನ ಸೌ. ವಿಜಯಲಕ್ಷ್ಮಿ ಚವ್ಹಾಣ. ರೆಫ್ರಿಜರೇಟರ್

## ಯುವ ಪ್ರತಿಭೆಗಳಿಗೆ ಪ್ರೋತ್ಸಾಹ



ಚಿಕ್ಕೋಡಿ ಲೋಕಸಭಾ ಮಾಜಿ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಹಾಗೂ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆಯವರು ಅಬ್ಬುಲಾಟ ಗ್ರಾಮದ 15 ವರ್ಷದ ಕು. ಜಿನೇಂದ್ರ ಸಾಂಗಾವೆ ಅವರಿಗೆ ಜೊಲ್ಲೆ ಗ್ರುಪ್ ವತಿಯಿಂದ ರೂ. 9,32,000/– ಮೊತ್ತದ ಉನ್ನತ ದರ್ಜೆಯ "ಕವಾಸಕಿ ಮೋಟೋಕ್ರಾಸ್ ಬೈಕ್‌ನ್ನು ಉಡುಗರೆಯಾಗಿ ನೀಡಿದರು.

ಸಣ್ಣ ವಯಸ್ಸಿನ ಹಳ್ಳಿಯ ಸಾಧಕರಾದ ಕು.ಜಿನೇಂದ್ರ ಸಂಗಾವೆ ತಮ್ಮ 7ನೇ ವಯಸ್ಸಿನಿಂದ ಕರ್ನಾಟಕ, ಮಹಾರಾಷ್ಟ್ರ, ಗೋವಾ, ಮಧ್ಯಪ್ರದೇಶ ವಿವಿಧ ರಾಜ್ಯದ ಸ್ಪರ್ಧೆಗಳಲ್ಲಿ ಭಾಗವಹಿಸಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಮೋಟೋಕ್ರಾಸ್ ಬೈಕ್ ಚಾಂಪಿಯನ್‌ದಲ್ಲಿ ಭಾಗವಹಿಸಿ 5 ರಾಷ್ಟ್ರ ಮಟ್ಟದ ಪ್ರಶಸ್ತಿಗಳು ಹಾಗೂ 175 ಪದಕಗಳನ್ನು ಹಾಗೂ ಟ್ರೋಫಿಗಳನ್ನು ತಮ್ಮ ಮುಡಿಗೇರಿಸಿಕೊಂಡು ಅತಿ ಕಿರಿಯ ವಯಸ್ಸಿನಲ್ಲಿ ಇಂತಹ ಮಹೋನ್ನತ ಸಾಧನೆ ಮಾಡಿದ್ದು ಹೆಮ್ಮೆಯ ವಿಷಯ. ಜಿನೇಂದ್ರ ಅವರ ಮುಂದಿನ ಸ್ಪರ್ಧೆಗಳಿಗೆ ಶುಭ ಹಾರೈಸಿದ ಸಂದರ್ಭ.



**ಚಾಲನೆ ನೀಡುತ್ತಿರುವುದು**

ಸೌಂದಲಗಾ ಗ್ರಾಮದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ಮಂಜೂರಾದ 33.50ಲಕ್ಷ ರೂ.ಮೊತ್ತದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡದ ಮೂಲಭೂತ ಸೌಕರ್ಯ ಹಾಗೂ ಉನ್ನತೀಕರಣ ನಿರ್ಮಾಣ ಕಾಮಗಾರಿಗೆ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಜೊಲ್ಲೆಯವರು ಚಾಲನೆ ನೀಡುತ್ತಿರುವ ದೃಶ್ಯ.



**ಸಹಕಾರ ಸಪ್ತಾಹ**

ಶ್ರೀ ಬೀರೇಶ್ವರ ಕೋ-ಆಫ್ ಕ್ರೆಡಿಟ್ ಸೊಸಾಯಿಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ್)ದಲ್ಲಿ 71 ನೇ ಸಹಕಾರ ಸಪ್ತಾಹದ ಅಂಗವಾಗಿ ಸಹಕಾರ ಕ್ಷೇತ್ರದ ಜನಕರಾದ ಗದಗ ಜಿಲ್ಲೆ ಕಣಗಿನಹಾಳದ ಶ್ರೀ ಸಿದ್ಧನಗೌಡಾ ಸಣ್ಣರಾಮನಗೌಡಾ ಪಾಟೀಲ, ಇವರ ಭಾವಚಿತ್ರಕ್ಕೆ ಚಿಕ್ಕೋಡಿ ಲೋಕಸಭಾ ಮಾಜಿ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆಯವರು ಪೂಜೆ ನೆರವೇರಿಸುತ್ತಿರುವ ದೃಶ್ಯ.



**ಪೂರ್ವಭಾವಿ ಬೈಠಕ್**

ಕಣ್ಣೇರಿ ಮಠದಲ್ಲಿ ವಿಶ್ವ ಹಿಂದು ಪರಿಷತ್-ಬಜರಂಗದಳ ಹಾಗೂ ಜೊಲ್ಲೆ ಗ್ರುಪ್ ಸಹಯೋಗದೊಂದಿಗೆ ಶ್ರೀ ಹನುಮ ಜನ್ಮಸ್ಥಳವಾದ ಅಂಜನಾದ್ರಿ ಪರ್ವತಕ್ಕೆ ಡಿಸೆಂಬರ್ 11, 12, ಹಾಗೂ 13 ರಂದು ಪ್ರಯಾಣ ಬೆಳೆಸುವ ನಿಟ್ಟಿನಲ್ಲಿ ಹನುಮಮಾಲಾ ಕಾರ್ಯಕ್ರಮದ ಪೂರ್ವಭಾವಿ ಬೈಠಕ್ ಕಣ್ಣೇರಿ ಮಠದ ಪ.ಪೂಜ್ಯ.ಜಗದ್ಗುರು ಅದೃಷ್ಟ ಕಾಡಸಿದ್ಧೇಶ್ವರ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಬಸವಜ್ಯೋತಿ ಯುಥ್ ಫೌಂಡೇಶನ ಅಧ್ಯಕ್ಷರಾದ ಶ್ರೀ. ಬಸವಪ್ರಸಾದ ಜೊಲ್ಲೆ ಯವರು ನಡೆಸಿದರು.



**ಚಾಲನೆ ನೀಡುತ್ತಿರುವುದು**

ಆಡಿ ಗ್ರಾಮದಲ್ಲಿ 10 ಲಕ್ಷ ರೂ. ದಲ್ಲಿ ನಿರ್ಮಿಸಲಾದ ಅತ್ಯಾಧುನಿಕ ವ್ಯಾಯಾಮ ಶಾಲೆಯನ್ನು (ಜಿಮ್) ಶ್ರೀ ಸಿದ್ದೇಶ್ವರ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಬಸವಜ್ಯೋತಿ ಯೂಥ್ ಫೌಂಡೇಶನ ಅಧ್ಯಕ್ಷರಾದ ಶ್ರೀ. ಬಸವಪ್ರಸಾದ ಜೊಲ್ಲೆ ಯವರು ಚಾಲನೆ ನೀಡುತ್ತಿರುವುದು.



**ನೂತನ ಶಾಖೆ ಉದ್ಘಾಟನೆ**

ರಾಯಚೂರು ನಗರದಲ್ಲಿ ಶ್ರೀ ಬೀರೇಶ್ವರ ಕೋ-ಆಫ್ ಕ್ರೆಡಿಟ್ ಸೊಸಾಯಿಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ್) ಶಾಖೆ-ರಾಯಚೂರು 220ನೇ ನೂತನ ಶಾಖೆಯ ಉದ್ಘಾಟನೆ ಹಾಗೂ ಪೂಜಾ ಸಮಾರಂಭವನ್ನು ಶ್ರೀ ಷ॥ಬ॥ಅಭಿನವ ರಾಚೋಟಿವೀರ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ 108 ಸಾವಿರ ದೇವರು ಷ॥ಬ॥ ಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮಿಜಿಗಳ ದಿವ್ಯ ಸಾನಿಧ್ಯದಲ್ಲಿ ಉದ್ಘಾಟಿಸುತ್ತಿರುವ ದೃಶ್ಯ.



**ನೂತನ ಶಾಖೆ ಉದ್ಘಾಟನೆ**

ರಾಯಬಾಗ ತಾಲೂಕಿನ ಕೋಳಿಗುಡ್ಡ ಗ್ರಾಮದಲ್ಲಿ ಶ್ರೀ ಬೀರೇಶ್ವರ ಕೋ-ಆಫ್ ಕ್ರೆಡಿಟ್ ಸೊಸಾಯಿಟಿ ಲಿ. ಯಕ್ಸಂಬಾ (ಮಲ್ಟಿ -ಸ್ಟೇಟ್) ಶಾಖೆ ಕೋಳಿಗುಡ್ಡ 221ನೇ ನೂತನ ಶಾಖೆಯ ಉದ್ಘಾಟನೆ ಹಾಗೂ ಪೂಜಾ ಸಮಾರಂಭವನ್ನು ಶೇಗುಣಶಿ ವಿರಕ್ತಮಠ ಶ್ರೀ ಮ.ನಿ.ಪ್ರ.ಶಂಕರ ಮಹಾಸ್ವಾಮಿಗಳು, ಶ್ರೀ ಮ.ನಿ.ಪ್ರ.ಡಾ. ಮಹಾಂತಪ್ರಭು ಮಹಾಸ್ವಾಮಿಜಿ, ದಿವ್ಯ ಸಾನಿಧ್ಯದಲ್ಲಿ ಉದ್ಘಾಟಿಸಿದರು.